151. ವಾರಂಟು ಇಲ್ಲದೆ ಪೋಲಿಸಿನವರು ಹಿಡಿಯಬಹುದಾದ ಯಾವಪ್ರೊಂದು ತಕ್ಸೀರ್ದುಮಾಡುವ ಯತ್ನ ನಡೆಯುವದಾಗಿ ತಿಳಿದ ಪೋಲಿಸು ಆಫಿಸರನು, ಸದರೀ ತಕ್ಸೀರು ಪ್ರಯತ್ನ ಗಾರನನ್ನ ಹಿಡದಫ್ಲಿನಃ, ಅಂಥಾದ್ದನ್ನ ತಡೆಯಕೂಡದೆಂತ ಅಂಥಾ ಆಫಿಸರನು ತಿಳಕೊಳ್ಳುವನಾದರೆ, ಮ್ಯಾಜಿಸ್ಟ್ರೇಟನ ಹುಕ್ಕುಂ—ವ— ವಾರಂಟ್ ಇಲ್ಲದೇನೇ ಸದರೀ ಪ್ರಯತ್ನಗಾರನನ್ನ ಹಿಡಿಯಬಹುದು.

ಅಂಥಾ ತಕ್ಸೀರುಗಳನ್ನು ಅಡ್ಡಿಮಾಡುವ ಕ್ಕೋಸ್ಕರ ಹಿಡಿಯೋಣ.

152. ಚರವಾದ— ಯಾ—ಸ್ಥಿರವಾದ ಪಬ್ಲಿಕ್ ಸ್ವತ್ತಿಗೆ, ಊನಪಡಿಸುವ ಪ್ರಯತ್ನ ವೇನಾದರೂ ನಡೆದು, ಅಥವಾ ಪಬ್ಲಿಕ್ ಭೂಮಿಯ ಗುರ್ತು ಅಥವಾ ಬೊಯಿ (Buoy) ಯೆಂಬ ನೀರಿನೆಗುರ್ತು ಅಥವಾ ನಾವೆಗೆ ಸಬಂಧವಾದ ಇತರ ಗುರ್ತು ಇಂಥಾದ್ದನ್ನು, ತೆಗದು ಹಾಕುವಂಥಾದ್ದು—ಯಾ—ಊನ ಪಡಿಸುವಂಥಾದ್ದು, ಪೋಲಿಸು ಆಫಿಸರ ದೃಷ್ಟಿಗೆ ಬಿದ್ದರೆ, ಅಂಥಾ ಸಂಗತಿಯಲ್ಲಿ ಅತನು ತನ್ನ ಸ್ವತಂತ್ರದಿಂದಲೇ ಅಂಥಾ ಹಾನಿ ಬಾರದಂತೆ ತಡೆಯುವ ಬಗ್ಗೆ ಪ್ರವರ್ತಿಸಬಹುದು.

ಪಬ್ಲಿಕ್ ಸೊತ್ತಿಗೆ ಹಾನಿಪಡಿಸದಂತೆ ಅಡ್ಡಿ ಮಾಡೋಣ.—

153. ಪೊಲೀಸು ಸ್ಟೇಷ್ಟ ಜಿಮ್ಮೆದಾರನಾದ ಯಾವನೊಬ್ಬ ಆಫಿಸರನಿಗೆ ಅಂಥಾ ಸ್ಟೇಷ್ಟ ಸರಹದ್ದಿನೊಳಗಿರುವ ಯಾವದೊಂದು ಸ್ಥಳದಲ್ಲಿ ಸುಳ್ಳಾದ ಬಟ್ಟುಗಳು—ಯಾ—ಅಳತೆ ಸಾಧನೆಗಳು—ಯಾ—ತೂಕ ಸಾಧನಗಳು, ಇರುತ್ತವೆ ಯೆಂತ ನಂಬಲಿಕ್ಕೆ ಕಾರಣವಿದ್ದರೆ ಅಂಥಾ ಸಂಗತಿಯಲ್ಲಿ ಅತನು ಅದರಲ್ಲಿ ಉಪಯೋಗಿಸುತ್ತಾ ಇರುವ—ಯಾ—ಇಟ್ಟಿರುವ ಬಟ್ಟುಗಳನ್ನು—ಯಾ—ಅಳತೆ ಸಾಧನಗಳನ್ನು—ಯಾ—ತೂಕದ ಸಾಧನಗಳನ್ನು ನೋಡುವ ನಿಮಿತ್ಯ—ಯಾ—ತಲಾಷ್‌ಮಾಡುವನಿಮಿತ್ಯ, ಅಂಥಾ ಸ್ಥಳಕ್ಕೆ ವಾರಂಟ್ ಇಲ್ಲದೇನೇ ಪ್ರವೇಶಿಸಬಹುದು.

ಬಟ್ಟುಗಳನ್ನೂ ಅಳತೆ ಸಾಧನಗಳನ್ನೂ ನೋಡೋಣ.

ಅಂಥಾಸ್ಥಳದಲ್ಲಿ ಯಾವ ಸುಳ್ಳು ಬಟ್ಟುಗಳಾದರೂ, ಅಳತೆ ಸಾಧನಗಳಾವರೂ,—ಯಾ—ತೂಕದ ಸಾಧನಗಳಾದರೂ, ಆತನಿಗೆ ಶಿಕ್ಕಿದರೆ; ಅವುಗಳನ್ನು ಹಿಡಿದು, ಹಾಗೆ ಹಿಡಿದ ಸಂಗತಿಯನ್ನು ಅಧಿಕಾರವುಳ್ಳ ಮ್ಯಾಜಿಸ್ಟ್ರೇಟಿಗೆ ಕೂಡಲೇ ತಿಳಿಸತಕ್ಕದ್ದು.

PART V.

5ನೇ ಭಾಗ.

INFORMATION TO THE POLICE AND THEIR POWERS TO INVESTIGATE.

ಪೋಲಿಸಿನವರಿಗೆ ವರ್ತಮಾನ, ಮತ್ತು ಪೋಲೀಸ್ ವಿಚಾರಣೆಮಾಡಲಿಕ್ಕೆ ಅವರಿಗೆ ಇರುವ ಅಧಿಕಾರಗಳು.

CHAPTER XIV.

14ನೇ ಅಧ್ಯಾಯ.

154. ವಾರಂಟು ಶಿವಾಯಿ ಹಿಡಿಯಬಹುದಾದ ತಕ್ಸೀರು ನಡದ್ದರನ್ನು ಕುರಿತು ಪ್ರತಿ ವರ್ತಮಾನವನ್ನು, ಅಂಥಾ ವರ್ತಮಾನವು ಪೋಲಿಸುಸ್ಟೇಷ್ಟ ಜಿಮ್ಮೆದಾರುಲ್ಲಿರುವ ಆಫಿಸರಗೆ ಜುಬಾನಿಯಾಗೆ ಕೊಡೋಣಾಗಿದ್ದಪಕ್ಷಕ್ಕೆ, ಆತನ್ನು ಆತನು ಸ್ವತಃ ಆಗಲೀ —ಯಾ—ಅವನ ಅನುಜ್ಞೆಗನುಗುಣವಾಗಿಯಾಗಲೀ ಬರಹವುಖಲಕ ಪಡಿಸತ

ಟ್ಟುವಾಯಿ ಹಿಡಿಯಬಹುದಾದ ಮೊಳಲಿ ವರ್ತಮಾನ.

ಕ್ಕದ್ದು, ಮತ್ತು ವರ್ತಮಾನ ಕೊಟ್ಟವನೆ ಅದನ್ನು ಓದಿ ಹೇಳತಕ್ಕದ್ದು; ಮತ್ತು ಅಂಥಾ ಪ್ರತಿ ವರ್ತಮಾನವೂ, ಬರಹಮೂಲಕವಾಗಿಯೇ ಕೊಡೋಣಾವಾಗ್ಯೂ ಸರಿಯೇ ಅಥವಾ ಮೇಲೆ ಹೇಳಿದ ಪ್ರಕಾರ ಬರಹಮೂಲಕ ಪಡಿಸಿದ್ದಾಗಿದ್ದರೂ ಸರಿಯೇ, ಅಂಥಾ ವರ್ತಮಾನ ಕೊಡುವವನ ದಸ್ಕತು ಅಕ್ಕೆ ಹಾಕಲ್ಪಡಬೇಕು, ಮತ್ತು ಅದರ ಸಾರಾಂಶವನ್ನು ಸ್ಥಳೀಯ ಗವರ್ನಮೆಂಟಿನವರು ಈ ಬಗ್ಯಾಗಿ ನಿರ್ಣಯಿಸುವ ನಮೂನೆಯ ಪ್ರಕಾರ ಅಂಥಾ ಆಫೀಸರು ಇಡಬೇಕಾದ ಪುಸ್ತಕದಲ್ಲಿ ದಾಖಲ್ ಮಾಡತಕ್ಕದ್ದು.

ವಾರಂಟಿಲ್ಲದೆ ಹಿಡಿಯಕೂಡದಾದ ಮೊಕದ್ದಮೆಗಳಲ್ಲಿ ವರ್ತಮಾನ.

155. ವಾರಂಟು ಇಲ್ಲದೆ ಪೋಲೀಸಿನವರು ಹಿಡಿಯಕೂಡದಾದ ಮೊಂದು ತಕ್ಕೀರು ತನ್ನ ಸ್ಟೇಷ್ಟ ಸರಹದ್ದಿನೊಳಗೆ ನಡೆದ್ದರನ್ನು ಕುರಿತು ಒಬ್ಬ ಪೋಲೀಸ್ ಸ್ಟೇಷ್ಟ ಜೆಮ್ಮೇದಾರನಾದಬಬ್ಬ ಆಫೀಸರನಿಗೆ ವರ್ತಮಾನ ಕೊಡೋಣಾದರೆ, ಅಂಥಾ ವರ್ತಮಾನದ ಸಾರಾಂಶವನ್ನು ಮೇಲೆ ಹೇಳಿದ ಪ್ರಕಾರ ಇಡೋಣಾಗುವ ಪುಸ್ತಕದಲ್ಲಿ ದಾಖಲುಮಾಡಿ, ವರ್ತಮಾನಕೊಟ್ಟವನನ್ನು ಮ್ಯಾಜಿಸ್ಟ್ರೇಟ್ ಬಳಿಗೆ ರಿಫರ್ ಮಾಡತಕ್ಕದ್ದು.

ವಾರಂಟು ಇಲ್ಲದೆ ಹಿಡಿಯಕೂಡದಾದ ಮೊಕದ್ದಮೆಗಳ ಪೋಲೀಸ್ ವಿಚಾರಣೆ.

ವಾರಂಟು ಇಲ್ಲದೆ ಪೋಲೀಸಿನವರು ಹಿಡಿಯಕೂಡದಾದ ತಕ್ಕೀರಿನ ಬಾಬತು ಮೊಕದ್ದಮೆಯನ್ನು ದರ್ಯಾಫ್ತು ಮಾಡಲಿಕ್ಕೆ—ಯಾ—ದರ್ಯಾಫ್ತು ಬಗ್ಯೆ ಕಮ್ಮಿಟು ಮಾಡುವ ಬಗ್ಯೆ ಅಧಿಕಾರ ಇರುವ ಫಸ್ಟ್ ಅಥವಾ ಸೆಕೆಂಡ್ ಕ್ಲಾಸ್ ಮ್ಯಾಜಿಸ್ಟ್ರೇಟನ ಹುಕುಮಿಲ್ಲದೆ ಯಾವನೊಬ್ಬ ಪೋಲೀಸ್ ಆಫೀಸರನು ವಿಚಾರಣೆ ಮಾಡಕೂಡದು.

ವಾರಂಟು ಇಲ್ಲದೆ ಹಿಡಿಯಬಹುದಾದ ಮೊಕದ್ದಮೆಗಳಲ್ಲಿ ಪೋಲೀಸ್ ವಿಚಾರಣೆ.

ಅಂಥಾ ಹುಕುಂ ತಲಪಿದ ಯಾವನೊಬ್ಬ ಪೋಲೀಸ್ ಆಫೀಸರನು ಸದರೀ ಪೋಲೀಸ್ ವಿಚಾರಣೆಯಲ್ಲಿ ವಾರಂಟು ಇಲ್ಲದೆ ಹಿಡಿಯಬಹುದಾದ ಮೊಕದ್ದಮೆಗಳಲ್ಲಿ ಒಬ್ಬ ಸ್ಟೇಷ್ಟ ಜೆಮ್ಮೇದಾರನಿಗೆ ಯಲ್ಲಿರುವ ಆಫೀಸರನು ಯಾವ ಅಧಿಕಾರಗಳನ್ನು ಚಲಾಯಿಸಬಹುದೋ ಅಂಥವುಗಳನ್ನು ವಾರಂಟು ಇಲ್ಲದೆ ಕೈದು ಮಾಡುವ ಅಧಿಕಾರ ವಿನಹಾ ಚಲಾಯಿಸಬಹುದು.

ವಾರಂಟು ವಿನಾಯಿ ಹಿಡಿಯಬಹುದಾದ ಮೊಕದ್ದಮೆಗಳಲ್ಲಿ ಪೋಲೀಸ್ ವಿಚಾರಣೆ.

156. ವಿಚಾರಣೆ-ಯಾ-ದರ್ಯಾಫ್ತು ಸ್ಥಳವನ್ನು ಕುರಿತು 15ನೇ ಅಧ್ಯಾಯದ ನಿಬಂಧನೆಗಳಿಗನುಗುಣವಾಗಿ ಆ ಸ್ಟೇಷ್ಟ ಸ್ಥಳೀಯ ಸರಹದ್ದಿನ ಒಳಗೆ ಅಧಿಕಾರ ಇರುವ ಕೋರ್ಟಿನವರು ಯಾವ ಮೊಕದ್ದಮೆಯನ್ನು ವಿಚಾರಣೆ ಮಾಡಲಿಕ್ಕೂ ಅಥವಾ ದರ್ಯಾಫ್ತು ಮಾಡಲಿಕ್ಕೂ ಅಧಿಕಾರ ಉಂಟೋ—ಪೋಲೀಸಿನವರು ವಾರಂಟು ಶಿವಾಯಿ ಹಿಡಿಯಬಹುದಾದ—ಅಂಥಾ ಮೊಕದ್ದಮೆಯನ್ನು ಒಬ್ಬ ಮ್ಯಾಜಿಸ್ಟ್ರೇಟನ ಅಪ್ಪಣೆ ಇಲ್ಲದೇನೇ ಪೋಲೀಸ್ ಸ್ಟೇಷ್ಟ ಜೆಮ್ಮೇದಾರನಿಗೆ ಯಲ್ಲಿ ಇರುವ ಯಾವನೊಬ್ಬ ಆಫೀಸರನಾದರೂ ವಿಚಾರಣೆ ಮಾಡಬಹುದು.

ಅಂಥಾ ಮೊಕದ್ದಮೆಗಳಲ್ಲಿ ಪೋಲೀಸು ಆಫೀಸರು ನಡಿಸಿದ ಯಾವದೊಂದು ವ್ಯವಹರಣೆ, ಅಂಥಾ ವ್ಯವಹರಣೆ ಯಾವ ಸ್ಥಿತಿಯಲ್ಲಿ ಇದ್ದಾಗ್ಯೂ ಸರಿಯೇ ಸದರೀ ಮೊಕದ್ದಮೆ ವಿಚಾರಣೆ ಮಾಡಲಿಕ್ಕೆ ಈ ಪ್ರಕರಣ ಪ್ರಕಾರ ಪೋಲೀಸು ಆಫೀಸರಿಗೆ ಅಧಿಕಾರವಿಲ್ಲವೆಂಬ ಸಬಬಿನ ಮೇಲೆ, ಆಕ್ಷೇಪಿಸಲ್ಪಡಕೂಡದು.

ವಾರಂಟುಶಿವಾಯಿ ಹಿಡಿಯಬಹುದಾದ ತಕ್ಕೀರು ಗುರ್ಮಾ ಇರುವ ಸಂಗತಿಯಲ್ಲಿ ನಡಿಸಬೇಕಾದ ನಡವಳಿಕೆ.

157. ವರ್ತಮಾನ ಶಿಕ್ಕಿಲಾಗಲೀ ಅಥವಾ ಅನ್ಯಾಯ ಆಗಲೀ, 154ನೇ ಪ್ರಕರಣಪ್ರಕಾರ ಪೋಲೀಸ್ ವಿಚಾರಣೆ ಮಾಡಲಿಕ್ಕೆ ತನಗೆ ಅಧಿಕಾರ ಇರುವ ಯಾವದೊಂದು ತಕ್ಕೀರು ನಡಿಯಿತೆಂದು ಬಂದಾ ಸ್ಟೇಷ್ಟ ಜೆಮ್ಮೇದಾರಯಲ್ಲಿರುವ ಒಬ್ಬ ಆಫೀಸರಿಗೆ, ಗುಮಾನು ಪಡಲಿಕ್ಕೆ ಕಾರಣವಿದ್ದರೆ, ಪೋಲೀಸು ರಿಪೋರ್ಟು ಮೇಲೆ ಅಂಥಾ ತಕ್ಕೀರು ವಿಷಯವಲ್ಲಿ ತನಿಖಿ ಮಾಡುವದಕ್ಕೆ ಅಧಿಕಾರ ಯಿರುವ ಮ್ಯಾಜಿಸ್ಟ್ರೇಟಿಗೆ ಆ ಸಮಾಚಾರವನ್ನು ಕೂಡಲೇ ರವಾನಿಸತಕ್ಕದ್ದು, ಮತ್ತು ಮೊಕದ್ದಮೆಯ ವಿದ್ಯಮಾನಗಳನ್ನೂ ತಿಗಳನ್ನೂ ಪೋಲೀಸು ವಿಚಾರಣೆ ಮಾಡಲಿಕ್ಕೂ ತಕ್ಕೀರುದಾರನನ್ನು ತಲಾಷ್ ಮಾಡಿ ಹಿಡಿಯಲಿಕ್ಕೂ ಮತ್ತು ವಾಗಿರಬಹುದಾದ ತರದೂದುಗಳನ್ನು ಮಾಡಲಿಕ್ಕೂ ತಕ್ಕೀರು ನಡೆದ್ದೆಂಬ ಸ್ಥಳಕ್ಕೆ ತಾನೇ ಹೋಗತಕ್ಕದ್ದು, ತನ್ನ ತಾಬೇದಾರಿ ಆಫೀಸರುಗಳ ಕೈಕೆ ಒಬ್ಬನನ್ನ ಕಳುಹಿಸತಕ್ಕದ್ದು.

ಪರಂತು, ಈ ಕೆಳಗಿನ ಮೇರೆಗೆ–

(a) ಅಂಥಾ ತಕ್ಸೀರು ಮಾಡಿದ್ದಾಗಿ ಯಾವ ಮನುಷ್ಯನ ಮೇಲಾದರೂ ಹೆಸರುನಿಶಿ ವರ್ತಮಾನ ಕೊಡೋಣಾದಾಗ ಮತ್ತು ಆ ಮೊಕದ್ದಮೆ ಭಾರಿ ಮೊಕದ್ದಮೆಯಾಗಿ ಯಿರದೆ ಯಿದ್ದರೆ, ಅಂಥಾ ಸಂಗತಿಯಲ್ಲಿ ಪೋಲಿಸ್ ಸ್ಟೇಷ್ಷ ಜಿಮ್ಮೆಯಲ್ಲಿ ಯಿರುವ ಆ ಫೀಸರನು ಸ್ಥಳದಲ್ಲಿ ತನಿಖಿಮಾಡತಕ್ಕ ಬಗ್ಗೆ ತಾನು ಸ್ವತಃ ಹೋಗತಕ್ಕದ್ದಾಗಲೀ ಅಥವಾ ತನ್ನ ತಾಬೇದಾರಿಯಾದ ಆಫಿಸರಗೆ ರವಾನಿಸುವದಾಗಲೀ ಅಗತ್ಯವಿಲ್ಲ.

ಸ್ಥಳೀಯ ವಿಚಾರಣೆ ಯಾವಾಗ್ಗೆ ಮಾಡಕ್ಕದ್ದು ಇಲ್ಲ.

(b) ಪೋಲಿಸ್ ಸ್ಟೇಷ್ಷ ತಾಬೇದಾರಿಯಲ್ಲಿರುವ ಆಫಿಸರಗೆ ಪೋಲಿಸು ವಿಚಾರಣೆ ಮಾಡಲಿಕ್ಕೆ ಸಾಕಾದ ಸಬಬ್ ತೋರದೆ ಹೋದರೆ, ಅವನು ಆ ಮೊಕದ್ದಮೆಯಲ್ಲಿ ವಿಚಾರಣೆ ಮಾಡತಕ್ಕದ್ದು ಇಲ್ಲ.

ಸ್ಟೇಷ್ಷ ಜಿಮ್ಮೆಯಲ್ಲಿರುವ ಪೋಲಿಸು ಆಫಿಸರಗೆ ಪೋಲಿಸ್ ವಿಚಾರಣೆ ಮಾಡಲಿಕ್ಕೆ ಸಾಕಾದ ಸಬಬ್ ತೋರದೆ ಹೋದರೆ.

(a) ಮತ್ತು (b) ಕ್ಲಾಜುಗಳಲ್ಲಿ ನಮೂದಿಸೋಣಾದ ಪ್ರತಿ ಮೊಕದ್ದಮೆಯಲ್ಲಿಯೂ ಈ ಪ್ರಕರಣದ ಮುಂದಣೇ ಕಲಮಿನ ನಿಬಂಧನೆಯನ್ನು ಪೂರ್ಣವಾಗಿ ಅನುಸರಿಸದೆ ಇರುವದಕ್ಕೆ ಇರಬಹುದಾದ ಸಬಬುಗಳನ್ನು ಪೋಲಿಸ್ ಸ್ಟೇಷ್ಷ ಜಿಮ್ಮೆಯಲ್ಲಿರುವ ಆಫಿಸರನು ಅತನ ಸದರೀ ರಿಪೋರ್ಟಿನಲ್ಲಿ ನಮೂದಿಸತಕ್ಕದ್ದು.

158. 157ನೇ ಪ್ರಕರಣದಪ್ರಕಾರ ಮ್ಯಾಜಿಸ್ಟ್ರೇಟಗೆ ಕಳುಹಿಸೋಣಾಗುವ ಪ್ರತಿ ಒಂದು ರಿಪೋರ್ಟು ಮೈಸೂರು ಗವರ್ಮೆಂಟಿನವರು ಸಾಧಾರಣ-ಯಾ-ವಿಶೇಷ ಹುಕುಂ ಮಾಡಿ, ತದ್ವಾರ ಇದಕ್ಕಾಗಿಯೇ ಮೊಕರರ್ ಮಾಡುವಂಥ ಪೋಲಿಸಿನ ಫಲಾನೆಮೇಲ್ ಉದ್ಯೋಗಸ್ಥನ ಮುಖಾಂತರವೇ ಕಳುಹಿಸಬೇಕೆಂತ ಅಪ್ಪಣೆ ಮಾಡಿರುವಲ್ಲಿ ಅಂಥಾ ಉದ್ಯೋಗಸ್ಥನ ಮುಖಾಂತರ ರವಾನಿಸತಕ್ಕದ್ದು.

157ನೇ ಪ್ರಕರಣದಪ್ರಕಾರ ಮಾಡುವ ರಿಪೋರ್ಟು ಹ್ಯಾಗೆ ಕಳುಹಿಸಲ್ಪಡತಕ್ಕದ್ದು.

ಸದರೀ ಮೇಲ್ ಉದ್ಯೋಗಸ್ಥನು ತನಗೆ ಯುಕ್ತವೆಂದು ತೋರುವಂಥಾ ಅನುಜ್ಞೆಗಳನ್ನು ಸ್ಟೇಷ್ಷ ಜಿಮ್ಮೆಯಲ್ಲಿ ಇರುವ ಆಫಿಸರಗೆ ಕೊಡಬಹುದು, ಮತ್ತು ಅಂಥಾ ಅನುಜ್ಞೆಗಳನ್ನು ಆ ರಿಪೋರ್ಟಿನಮೇಲೆ ಒರಟು, ಕಾಲವಿಳಂಬವಿಲ್ಲದೆ ಅದನ್ನು ಮ್ಯಾಜಿಸ್ಟ್ರೇಟಿನ ಬಳಿಗೆ ಕಳುಹಿಸತಕ್ಕದ್ದು.

159. ಅಂಥಾ ರಿಪೋರ್ಟ್ ಅಂಥಾ ಮ್ಯಾಜಿಸ್ಟ್ರೇಟಗೆ ತಲ್ಪಿದಾಗ, ಈ ಕೋಶದಲ್ಲಿ ನಿಬಂಧಿಸೋಣಾದ ಮೇರೆಗೆ ಸದರೀ ಮೊಕದ್ದಮೆಯನ್ನು ಪೋಲಿಸ್ ವಿಚಾರಣೆ ಮಾಡುವ ಬಗ್ಗೆ ಆಗಲೀ ಅಥವಾ ಪ್ರಥಮ ವಿಚಾರಣೆ ಮಾಡುವ ಉದ್ದಿಶ್ಯವಾಗಲೀ ಅಥವಾ ಅನ್ಯಥಾ ಕಡಿಬಿಕಾ ಮಾಡಲಿಕ್ಕಾಗಲೀ, ತನಗೆ ಯುಕ್ತತೋರಿದರೆ, ಕೂಡಲೇ ಸ್ವತಃ ಹೋಗಬಹುದು, ಅಥವಾ ತನ್ನ ತಾಬೇದಾರಿಯ ಮಾಜಿಸ್ಟ್ರೇಟರಪೈಕಿ ಯಾರನ್ನಾಗಲೀ ಕಳುಹಿಸಬಹುದು.

ಪೋಲೀಸು ವಿಚಾರಣೇ ಮಾಡಲಿಕ್ಕೆ–ಯಾ–ಪ್ರಥಮ ವಿಚಾರಣೆ ಮಾಡಲಿಕ್ಕೆ ಅಧಿಕಾರ.

160. ಈ ಅಧ್ಯಾಯಕ್ಕನುಗುಣವಾಗಿ ಪೋಲಿಸ್ ವಿಚಾರಣೆ ಮಾಡುವ ಯಾವನೊಬ್ಬ ಪೋಲೀಸ್ ಆಫಿಸರನಾಗಲೀ ಮೊಕದ್ದಮೆಯ ಸಂಗತಿಗಳು ತಿಳದವನಾಗಿ ಕೊಡೋಣಾದ ವರ್ತಮಾನದಿಂದಾಗಲೀ–ಯಾ–ಅನ್ಯಥಾ ಆಗಲೀ ಕಾಣಬರುವ, ತನ್ನ ಸ್ವಂತ –ಯಾ–ಬಾಜೂ ಸ್ಟೇಷನಿನ ಸರಹದ್ದುಗಳೊಳಗೆ ಇರುವ ಮನುಷ್ಯನನ್ನು ತನ್ನ ಮುಂದೆ ಹಾಜರಾಗ ಹೇಳಿ, ಬರಹ ಮೂಲಕವಾದ ಹುಕುಮಿನದ್ವಾರಾ ವಿಧಿಸಬಹುದು; ಮತ್ತು ಅಂಥಾ ಮನುಷ್ಯನು ತನ್ನನ್ನು ಅಪೇಕ್ಷಿಶಿದಮೇರೆಗೆ ಹಾಜರಾಗತಕ್ಕದ್ದು.

ಸಾಕ್ಷಿಗಾರರನ್ನ ಹಾಜರುಪಡಿಸಿ ಕೊಳ್ಳಲಿಕ್ಕೆ ಪೋಲೀಸ್ ಆಫೀಸರಗೆ ಇರುವ ಅಧಿಕಾರ.

161. ಈ ಅಧ್ಯಾಯಕ್ಕನುಗುಣವಾಗಿ ಪೋಲಿಸ್ ವಿಚಾರಣೆ ಮಾಡುವ ಯಾವನೊಬ್ಬ ಪೋಲಿಸ್ ಆಫಿಸರ ಪೋಲೀಸ್‌ನವರಿಂದ ಸಾಕ್ಷಿಗಳ ವಿಚಾರಣೆ. ತನು ಮೊಕದ್ದಮೆಗಳ ವಿಷ್ಯವಾಗಳನ್ನೂ ವ-ಸಂಗತಿಗಳನ್ನೂ ತಿಳಿದ;

ವನಾಗಿ ತೋರುವ ಯಾವನೊಬ್ಬ ಮನುಷ್ಯನನ್ನಾದರೂ, ಜಾಬಾನಿಯಾಗಿ ವಿಚಾರಣೆಮಾಡಿ, ಹಾಗೆ ವಿಚಾರಣೆ ಮಾಡಲ್ಪಟ್ಟ ಮನುಷ್ಯನ ಹೇಳಿಕೆಯನ್ನು ಆತನು ಬರಹ ಮೂಲಕ ಪಡಿಸಬಹುದು.

ತನ್ನ ಮೇಲೆ ಅಪರಾಧ ಹೊರಿಸುವ-ಯಾ-ದಂಡಕ್ಕೆ-ಯಾ-ಶಿಕ್ಷೆಗೆ ಗುರಿಪಡಿಸಬಹುದಾಗಿ ಭಾವ ತೋರುವ ಪ್ರಶ್ನೆಗಳನ್ನು ಶಿವಾಯಿ, ಸದರೀ ಮೊಕದ್ದಮೆಗೆ ಸಂಬಂಧಪಡುವದಾಗಿ ಅಂಥಾ ಅಧಿಸರು ಹಾಕುವ ಇತರ ಎಲ್ಲಾ ಪ್ರಶ್ನೆಗಳಿಗೂ ಎತಾರ್ಥವಾಗಿ ಜವಾಬು ಕೊಡಲಿಕ್ಕೆ ಅಂಥಾ ಮನುಷ್ಯನು ಬದ್ಧನಾಗಿರತಕ್ಕದ್ದು.

162. ಈ ಅಧ್ಯಾಯಕ್ಕನುಗುಣವಾಗಿ ನಡಿಸುತ್ತಾ ಇರುವ ಪೋಲೀಸ ವಿಚಾರಣೆಯಲ್ಲಿ ಪೋಲಿಸ್ ಅಧಿಸರ ನೊಂದಿಗೆ ಯಾವನೊಬ್ಬ ಮನುಷ್ಯನು ಮಾಡೋಣಾದ ಮರಣಕಾಲದ ಹೇಳಿಕೆಯ ವಿನಹ ಇತರಹೇಳಿಕೆ, ಬರಹ ಮೂಲಕ ಪಡಿಸೋಣಾಗಿದ್ದರೆ, ಹಾಗೆ ಹೇಳಿಕೆ ಹೇಳಿದವನು ದಸ್ತತು ಮಾಡಬೇಕಾದ್ದಿಲ್ಲ, ಅಥವಾ ಆಪಾದ ನೆಪಟ್ಟವನಿಗೆ ವಿರೋಧವಾಗಿ ಸಾಕ್ಷ್ಯವಾಗಿ ಉಪಯೋಗಿಸಲ್ಪಡಲೂ ಕೂಡದು.

ಪೋಲೀಸನವರೊಂದಿಗೆ ಕೊಡೋಣಾದ ಹೇಳಿಕೆಗೆ ದಸ್ತತು ಹಾಕಲ್ಪಡತಕ್ಕದ್ದಿಲ್ಲ ಅಥವಾ ರುಜುವಾತಾಗಿ ಅಂಗೀಕರಿಸಕೂಡದು.

1872ನೇ ಇಸವಿ ಇಂಡಿಯ್ಯ ಎವಿಡೆನ್ಸು ಆಕ್ಟಿನ 27ನೇ ಪ್ರಕರಣದಲ್ಲಿರುವ ನಿಬಂಧನೆಗಳಿಗೆ ಈ ಪ್ರಕರಣ ದಲ್ಲಿ ಇರುವಂಥಾದ್ದು ಯಾವದೂ ಬಾಧಿಸುವದೆಂತ ಎಣಿಸಲ್ಪಡ ಕೂಡದು.

163. ಯಾವನೊಬ್ಬ ಪೋಲಿಸ್ ಅಧಿಸರನಾಗಲೀ ಅಥವಾ ಅಧಿಕಾರದಲ್ಲಿರುವ ಮನುಷ್ಯನಾಗಲೀ, 1872ನೇ ಇಸವಿ ಇಂಡಿಯ್ಯ ಎವಿಡೆನ್ಸು ಆಕ್ಟಿನ 24ನೇ ಪ್ರಕರಣದಲ್ಲಿ ನಮೂದಿಸಿ ರುವಂತಾ ಅಶೋತ್ತರವನ್ನಾಗಲೀ, ಅಥವಾ ಪಾಗ್ದನವಾಗಲೀ ಕೊಡಲೂ ಅಥವಾ ಅಂಜಿಕೆಯನ್ನು ಹುಟ್ಟಿಸಲೂಕೂಡದು-ಯಾ-ಹಾಗೆ ಹುಟ್ಟಿಸುವ ಹಾಗೆ-ಯಾ-ಕೊಡಿಸಲ್ಪಡುವಹಾಗೆ, ಮಾಡಲೂ ಕೂಡದು.

ಕಬೂಲಾತಿಯ ಯಾವ ಅಶೋತ್ತರವನ್ನೂ ಹೇಳಕೂಡದು.

ಪರಂತು-ಯಾವನೊಬ್ಬನಾಗಲೀ ಈ ಅಧ್ಯಾಯಕ್ಕನುಗುಣವಾಗಿ ಮಾಡೋಣಾಗುವ ವಿಚಾರಣೆಯ ಕಾಲದಲ್ಲಿ ತಾನೇ ಮನಃಪೂರ್ತಿಯಾಗಿ ಹೇಳುವದಕ್ಕೆ ತಾತ್ಪರ್ಯಪಡುವ ಹೇಳಿಕೆಯನ್ನು ಹೇಳದಂತೆ ಯೆಚ್ಚರಿಕೆಯಿಂದಾಗಲೀ -ಯಾ-ಅನ್ಯಥಾ ಆಗಲೀ ಯಾವ ಪೋಲಿಸ್ ಅಧಿಸರಾದರೂ ಸರಿಯೇ ಅಥವಾ ಯಾವ ಮನುಷ್ಯನಾದರೂ ಸರಿಯೇ ಅಡ್ಡಿಮಾಡಕೂಡದು.

164. ಯಾವ ಮ್ಯಾಜಿಸ್ಟ್ರೇಟಾದರೂ ಈ ಅಧ್ಯಾಯವನ್ನನುಸರಿಸಿ ವಿಚಾರಣೆಮಾಡುವ ಕಾಲದಲ್ಲಿಯಾಗಲಿ, ಅಥವಾ ತದನಂತರ ವಿಚಾರಣೆ-ಯಾ-ದರಿಯಾಫ್ತಿ ಪುರುಮಾಡುವದಕ್ಕಿಂತ ಮುಂಚಿ ತನಿಗೆ ಹೇಳಲ್ಪಡುವ ಕೈಫಿಯತ್ತನ್ನಾಗಲಿ ರಿಕಾರ್ಡು ಮಾಡಬ ಹುದು. ಪರಂತು ಸದರೀ ಮ್ಯಾಜಿಸ್ಟ್ರೇಟರು ಸದರೀ ವಿಚಾರಣೆಯಲ್ಲಿ ಪೋ ಲಿಸ್ ಅಧಿಸರಾಗಿ ಅಮಲ್ ನಡಶಿರಕೂಡದು.

ಹೇಳಿಕೆಗಳನ್ನೂ ತಕ್ಕೀರು ಕಬೂಲಾತಿಗಳನ್ನೂ ರಿಕಾರ್ಡು ಮಾಡಲಿಕ್ಕೆ ಅಧಿಕಾರ.

ಅಂಥಾ ಹೇಳಿಕೆಗಳನ್ನು ಸಾಕ್ಷ್ಯವನ್ನು ರಿಕಾರ್ಡು ಮಾಡುವದಕ್ಕೊಸ್ಕರ ಇದರ ಕೆಳಗೆ ನಿರ್ದೇಶಿಸೋಣಾ ದ ರೀತಿಗಳಲ್ಲಿ ಆಯಾ ಮೊಕದ್ದಮೆಗಳ ಸಂಗತಿಗಳಿಗನುಗುಣವಾಗಿ, ಅತ್ಯುತ್ತಮವಾಗಿ ಆತನಿಗೆ ತೋರುವ ರೀತಿ ಯಲ್ಲಿ ರಿಕಾರ್ಡು ಮಾಡತಕ್ಕದ್ದು ; ಅಂಥಾ ತಕ್ಕೀರು ಕಬೂಲಾತಿಗಳು 364ನೇ ಪ್ರಕರಣದಲ್ಲಿ ಒದ್ದಡಿಸೋಣಾದ ರೀ ತಿಯಲ್ಲಿ ರಿಕಾರ್ಡು ಮಾಡಲ್ಪಟ್ಟು, ದಸ್ತತ್ ಹಾಕಲ್ಪಡತಕ್ಕದ್ದು, ಮತ್ತು ಅನಂತರ ಮೊಕದ್ದಮೆ ಯಾರಿಂದ ವಿಚಾರ -ಯಾ-ದರ್ಯಾಫ್ತಿ ಮಾಡಲ್ಪಡುವದೋ ಆ ಮ್ಯಾಜಿಸ್ಟ್ರೇಟಿಗೆ ರವಾನಿಸಲ್ಪಡತಕ್ಕದ್ದು.

ತಕ್ಕೀರು ಕಬೂಲಾತಿಯು ಸ್ವೇಚ್ಛೆಯಾಗಿ ಕೊಡಲ್ಪಟ್ಟಿತೋ ಯೆಂಬದನ್ನು ಆ ಹೇಳಿಕೆ ಹೇಳುವ ಮನುಷ್ಯನ ವಿಚಾರಣೆಮೇಲೆ ಮ್ಯಾಜಿಸ್ಟ್ರೇಟನು ನಂಬಲಿಕ್ಕೆ ಕಾರಣವಿದ್ದರೇನೇ ಹೊರತು ಅನ್ಯಥಾ ರಿಕಾರ್ಡು ಮಾಡಬ್ಯೇಕಾದ್ದಿ

1103

ಲ್ಲ, ಮತ್ತು ಯಾವದೊಂದು ತಕ್ಕೀರು ಕಬೂಲಾತಿಯನ್ನೂ ರಿಕಾರ್ಡು ಮಾಡುವ ಕಾಲದಲ್ಲಿ ಅಂಥಾ ಕಬೂಲಾತಿಯು ಕೆಳಗೆ–ಕೆಳಗಣ ಅರ್ಥಕೊಡುವಹಾಗೆ ನೊಂದು ಮಿವೋರಾಂಡವನ್ನು ಬರೆಯತಕ್ಕದ್ದು:—

"ಈ ಕಬೂಲಾತಿಯು ಸ್ವೀಚ್ಛೆಯಾಗಿ ಕೊಡಲ್ಪಟ್ಟಿತೆಂದು ನಾನು ನಂಬುತ್ತೇನೆ. ಅದು ನನ್ನ ಸಮಕ್ಷಮದಲ್ಲಿ–ವ–ಕೇಳಿಸುವಿಕೆಯಲ್ಲಿ ತಕ್ಕೊಳ್ಳೋಣಾಗಿ ಆ ಹೇಳಿಕೆ ಹೇಳಿದ ಮನುಷ್ಯಗೆ ಓದಿ ಹೇಳಿದ್ದರಲ್ಲಿ ಅದು ಸರಿಯಾಗಿದೆಯೆಂತಲೂ ಅದರಲ್ಲಿ ತಾನು ಹೇಳಿದ ಹೇಳ್ವಿಕೆಯು ಪೂರ್ಣವಾಗಿಯೂ ಯಥಾರ್ಥ ಸ್ಥಿತಿಯಲ್ಲಿ ಇರುವದಾಗಿಯೂ ಒಪ್ಪಿದ್ದಾನೆ.

"(ದಸ್ಕತು) A. B.,

"ಮ್ಯಾಜಿಸ್ಟ್ರೇಟ್."

ಪೋಲೀಸ್ ಆಫೀಸರಿಂದ ಝಡ್ತಿ.

165. ಬಂದು ಪೋಲೀಸ್ ಸ್ಟೇಷ್ಟ ಜೆಮ್ಮೈಯಲ್ಲಿ ಇರುವ ಆಫಿಸರನಾಗಲೀ, ಅಥವಾ ಪೋಲೀಸ್ ವಿಚಾರಣೆಯನ್ನು ಮಾಡುವ ಪೋಲೀಸ್ ಆಫಿಸರನಾಗಲೀ, ತಾನು ಪೋಲೀಸು ವಿಚಾರಣೆ ಮಾಡಲಿಕ್ಕೆ ಅಧಿಕಾರ ಇರುವ ಯಾವ ತಕ್ಸೀರಿನ ಬಾಬತಾದರೂ ಪೋಲೀಸ್ ವಿಚಾರಣೆ ನಡೆಯಲಿಕ್ಕೆ ಯಾವ ದಸ್ತಾವೇಜಾದರೂ—ಯಾ–ಪದಾರ್ಥವಾದರೂ ಅದರ ಹಾಜರಾತಿ ಅವಶ್ಯವಾದ್ದಿಂತ ತಿಳಿದರೆ, ಮತ್ತು 94ನೇ ಪ್ರಕರಣದಪ್ರಕಾರ ಸಮ್ಮ್ನ–ಯಾ–ಹುಕ್ಕುಂ ಕೊಡಲ್ಪಟ್ಟ–ಯಾ–ಕೊಡಲ್ಪಡಬಹುದಾದ ಮನುಷ್ಯನು ಆ ಸಮ್ಮ್ನ–ಯಾ–ಹುಕುಮಿನಲ್ಲಿ ನಿರ್ದೇಶಿಸೋಣಾದ ಮೇರಿಗೆ ಆ ದಸ್ತಾವೇಜನ್ನ ಅಥವಾ ಪದಾರ್ಥವನ್ನ ಹಾಜರುಮಾಡಲಿಕ್ಕಿಲ್ಲವೆಂತ ನಂಬಲಿಕ್ಕೆ ಕಾರಣ ತೋರಿದರೆ, ಅಥವಾ ಸದರೀ ದಸ್ತಾವೇಜು–ಯಾ–ಪದಾರ್ಥ ಯಾವನೊಬ್ಬನ ಸ್ವಾಧೀನದಲ್ಲೇ ಇರುತ್ತದೆಂಬದು ಗೊತ್ತಿಗೆ ಬಾರದೆ ಇದ್ದರೆ, ತಾನು ಯಾವ ಸ್ಟೇಷ್ಟ ಜೆಮ್ಮೈಯಲ್ಲಿ ಇರುತ್ತಾನೋ ಅಥವಾ ಯಾವ ಸ್ಟೇಷನಿಗೆ ಶೇರಿ ಇರುತ್ತಾನೋ ಆ ಸ್ಟೇಷ್ಟ ಸರಹದ್ದುಗಳೊಳಗಿರುವ ಯಾವ ಸ್ಥಳದಲ್ಲಿ ಆದರೂ ಅದಕ್ಕೋಸ್ಕರ ಝಡ್ತೀಮಾಡಬಹುದು–ಯಾ–ಮಾಡಿಸಲೂಬಹುದು.

ಅಂಥಾ ಆಫಿಸರನು ಝಡ್ತಿಯನ್ನು, ಸಾಧ್ಯವಾಗಿದ್ದಲ್ಲಿ, ತಾನು ಖುದ್ದಾಗಿ ನಡಿಸತಕ್ಕದ್ದು.

ಖುದ್ದಾಗಿ ಝಡ್ತೀ ನಡಿಸಲಿಕ್ಕೆ ತಾನು ಅಶಕ್ತನಾದರೆ, ಮತ್ತು ಆ ಕಾಲದಲ್ಲಿ ಹಾಜರಿದ್ದು ಝಡ್ತಿ ನಡಿಸುವದಕ್ಕೆ ಲಾಯಕಾದ ಇತರ ಮನುಷ್ಯನು ಇಲ್ಲದೆ ಇದ್ದರೆ, ಅವನು ತನಗೆ ತಾಬೇದಾರನಾಗಿರುವ ಯಾವ ಆಫಿಸರನನ್ನಾದರೂ, ಝಡ್ತಿ ಮಾಡಹೇಳಿ ಅಪೇಕ್ಷಿಸಬಹುದು, ಮತ್ತು ಅಂಥಾ ತಾಬೇದಾರಿ ಆಫಿಸರನಿಗೆ ಬರಹ ಮೂಲವಾಗಿ ಬಂದು ಹುಕುಮನ್ನು ಕೊಡತಕ್ಕದ್ದು. ಅದರಲ್ಲಿ ಯಾವ ದಸ್ತಾವೇಜು–ಯಾ–ಪದಾರ್ಥದಬಗ್ಗೆ ಝಡ್ತೀ ಮಾಡೋಣಾಗ ಬೇಕೋ ಅವುಗಳನ್ನೂ, ಝಡ್ತೀ ಮಾಡಬೇಕಾದ ಸ್ಥಳವನ್ನೂ ಕೂಡಾ ನಮೂದಿಸತಕ್ಕದ್ದು; ಮತ್ತು ಅಂಥಾ ತಾಬೇದಾರಿ ಆಫಿಸರನು ಆ ಮೇಲೆ ಸದರೀ ಸ್ವತ್ತಿಗೋಸ್ಕರ ಸದರೀ ಸ್ಥಳದಲ್ಲಿ ಝಡ್ತೀ ಮಾಡಬಹುದು.

ಝಡ್ತೀ ವಾರಂಟುಗಳಿಗೆ ಸಂಬಂಧವಾದ ಈ ಕೋಡಿನ ನಿಬಂಧನೆಗಳು, ಸಾಧ್ಯವಾಗುವಷ್ಟರಮಟ್ಟಿಗೆ ಈ ಪ್ರಕರಣಕ್ಕನುಗುಣವಾಗಿ ಮಾಡೋಣಾಗುವ ಝಡ್ತೀಗಳಿಗೆ ಲಗಾವಾಗತಕ್ಕದ್ದು.

ಪೋಲೀಸ್ ಸ್ಟೇಷ್ಟ ಜೆಮ್ಮೈಯಲ್ಲಿ ಇರುವ ಆಫಿಸರು ಝಡ್ತೀವಾರಂಟು ಕೊಡಹೇಳಿ ಮತ್ತೊಬ್ಬ ಸ್ಟೇಷ್ಟ ಆಫೀಸರನ್ನು ಯಾವಾಗ ಕೇಳಬಹುದು.

166. ಬಂದು ಪೋಲೀಸು ಸ್ಟೇಷನಿನ ಜೆಮ್ಮೈದಾರನಾದ ಒಬ್ಬ ಆಫಿಸರನು, ಅದೇ ಡಿಸ್ಟ್ರಿಕ್ಟಿನಲ್ಲಿ ಅಥವಾ ಬೇರೆ ಡಿಸ್ಟ್ರಿಕ್ಟಿನಲ್ಲಿ ಇರುವ ಪೋಲೀಸ್ ಸ್ಟೇಷ್ಟ ಜೆಮ್ಮೈದಾರನನ್ನು ತನ್ನ ಸ್ವಂತ ಸರಹದ್ದುಗಳೊಳಗೆ ತಾನು ಯಾವ ಮೊಕದ್ದಮೆಯಲ್ಲಿ ಝಡ್ತೀ ಮಾಡಿಸಬಹುದೋ ಅಂಥಾ ಮೊಕದ್ದಮೆಯಲ್ಲಿ ಯಾವ ಸ್ಥಳದಲ್ಲಾದರೂ ಝಡ್ತಿ ಮಾಡಿಸಲು ಅಪೇಕ್ಷಿಸಬಹುದು.

ಅಂಥಾ ಆಫಿಸರನು, ಹಾಗೆ ಅಪೇಕ್ಷಿಸಲ್ಪಟ್ಟಾಗ, 165ನೇ ಪ್ರಕರಣದಲ್ಲಿ ಏರ್ಪಡಿಸೋಣಾದ ನಿಬಂಧನೆಯಮೇರೆಗೆ ಪ್ರವರ್ತಿಸತಕ್ಕದ್ದು, ಮತ್ತು ಶಿಕ್ಕಿದ ಪದಾರ್ಥ ಏನಾದರೂ ಇದ್ದರೆ, ಯಾರ ಅಪೇಕ್ಷೆಮೇರೆಗೆ ಝಡ್ತೀಮಾಡೋಣಾಯಿತೋ ಆ ಆಫಿಸರಗೆ ಕಳುಹಿಸತಕ್ಕದ್ದು.

167. 61ನೇ ಪ್ರಕರಣದಲ್ಲಿ ನಿರ್ಣಯಿಸೋಣಾದ 24 ಘಂಟೆಗಳ ಸಮಯದೊಳಗೆ ಈ ಅಧ್ಯಾಯಕ್ಕನುಗುಣವಾಗಿ ಮಾಡುವ ಪೋಲಿಸು ವಿಚಾರಣೆಯು ಪೂರ್ತಿ ಮಾಡಲ್ಪಡಕೂಡದೆಂತ ತೋರಿದರೆ, ಮತ್ತು ಅಪರಾಧನೆಯು ಒಳ್ಳೇಸಕಾರಣವಾದ್ದು ಎಂತ ನಂಬಲಿಕ್ಕೆ ಕಾರಣವಿದ್ದರೆ, ಪೋಲಿಸು ಸ್ಟೇಷನ್ ಜಿಮ್ಮೆಯಲ್ಲಿ ಇರುವ ಆಫಿಸರನು ಈ ಕೆಳಗೆ ಏರ್ಪಡಿಸೋಣಾದ ಕ್ರಮಕ್ಕನುಗುಣವಾಗಿ ಇಡುವ ಡೈರಿಯ ಸದರೀ ಮೊಕದ್ದಮೆಗೆ ಸಂಬಂಧಪಟ್ಟ ಖತಾಯಿತ್ತಿಗಳ ಬಂದು ನಕಲನ್ನು ಸಮೀಪದಲ್ಲಿ ಇರುವ ಮ್ಯಾಜಿಸ್ಟ್ರೇಟಿಗೆ ಕೂಡಲೇ ರವಾನಿಸತಕ್ಕದ್ದು; ಮತ್ತು ಅದೇಕಾಲದಲ್ಲಿ ಆಪಾದನೇ ಪಟ್ಟವನನ್ನ ಅಂಥಾ ಮ್ಯಾಜಿಸ್ಟ್ರೇಟಿನಬಳಿಗೆ ಕಳುಹಿಸತಕ್ಕದ್ದು.

ಪೋಲೀಸ್ ವಿಚಾರಣೆಯು 24 ಘಂಟೆಗಳೊಳಗೆ ಪೂರ್ತಿ ಮಾಡಲ್ಪಡಕೂಡದಿದ್ದರೆ ನಡಿಸತ್ಕಾವ ಕ್ರಮ.

ಈ ಪ್ರಕರಣಕ್ಕನುಗುಣವಾಗಿ ಆಪಾದನೇ ಪಟ್ಟವನು ಯಾವ ಮ್ಯಾಜಿಸ್ಟ್ರೇಟಿನಬಳಿಗೆ ಕಳುಹಿಸಲ್ಪಟ್ಟಿರುತ್ತಾನೋ, ಅವನು ಆ ಮೊಕದ್ದಮೆಯನ್ನು ತನಖಿಮಾಡುವದಕ್ಕೆ ತನಗೆ ಅಧಿಕಾರವಿದ್ದಾಗ್ಯೂ ಸರಿಯೇ ಇಲ್ಲದೆ ಹೋದಾಗ್ಯೂ ಸರಿಯೇ, 15 ದಿವಸಕ್ಕೆ ಮಿಾರದೆ ತನಗೆ ಯುಕ್ತತೋರುವ ವೊಂದು ಕಾಲಕ್ಕೆ ಆಪಾದನೆ ಪಟ್ಟವನನ್ನು ಕೈದಿನಲ್ಲಿ ಇಡುವಬಗ್ಯೆ ಆಗಾಗ್ಯೆ ಅಧಿಕಾರ ಕೊಡಬಹುದು. ಸದರೀ ಮೊಕದ್ದಮೆಯನ್ನು ವಿಚಾರಣೆ ಮಾಡುವದಕ್ಕಾಗಲೀ ದಯರ್ಾಪ್ತಿಬಗ್ಯೆ ಕಮ್ಮಿಟು ಮಾಡತಕ್ಕಬಗ್ಯೆ ಆಗಲೀ ತನಗೆ ಅಧಿಕಾರ ಇಲ್ಲದೆ ಇದ್ದರೆ, ಮತ್ತು, ಆಪಾದನೆ ಪಟ್ಟವನನ್ನು ಇನ್ನು ತಡೆದಿಡುವದು ಅನಾವಶ್ಯಕವೆಂತ ಆತನು ತಿಳಕೊಳ್ಳುವನಾದರೆ, ಅಧಿಕಾರ ಇರುವ ಮ್ಯಾಜಿಸ್ಟ್ರೇಟನಬಳಿಗೆ ಆಪಾದನೆ ಪಟ್ಟವನನ್ನು ಕಳುಹಿಸುವಹಾಗೆ ಹುಕುಂ ಮಾಡಬಹುದು.

ಈ ಪ್ರಕರಣಕ್ಕನುಗುಣವಾಗಿ ಪೋಲೀಸಿನವರ ಭದ್ರತೆಯಲ್ಲಿ ಇಡಿರಲಿಕ್ಕೆ ಅಧಿಕ್ಕಾರಕೊಡುವ ಒಬ್ಬ ಮ್ಯಾಜಿಸ್ಟ್ರೇಟನು ಹೀಗೆ ಕೊಡುವದಕ್ಕಾಗಿ ತನ್ನ ಸಬಬುಗಳನ್ನು ರಿಕಾತು ಮಾಡತಕ್ಕದ್ದು.

ಅಂಥಾ ಹುಕುಂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್-ಯಾ-ಸಬ್‌ಡಿವಿಜನಲ್ ಮ್ಯಾಜಿಸ್ಟ್ರೇಟಲ್ಲದೆ ಇತರ ಮ್ಯಾಜಿಸ್ಟ್ರೇಟಿನಿಂದ ಕೊಡಲ್ಪಟ್ಟಿದ್ದರೆ, ಸದರೀ ಮ್ಯಾಜಿಸ್ಟ್ರೇಟು ತನ್ನ ಹುಕುಮಿನ ನಕಲನ್ನು, ಹಾಗೆ ಹುಕುಂ ಮಾಡಲಿಕ್ಕೆ ತನ್ನ ಕಾರಣಗಳನ್ನಿತ್ತಿ, ತಾನು ಯಾರಿಗೆ ತಾಬೇದಾರನಾಗಿದ್ದಾನೋ ಆ ಮ್ಯಾಜಿಸ್ಟ್ರೇಟಿಗೆ ಕಳುಹಿಸತಕ್ಕದ್ದು.

168. ಈ ಅಧ್ಯಾಯದಪ್ರಕಾರ ಯಾವನೊಬ್ಬ ಸಬಾರ್ಡಿನೇಟ್ ಪೋಲಿಸು ಆಫಿಸರನು ಯಾವದಾದರೂ ಪೋಲಿಸು ವಿಚಾರಣೆ ಮಾಡಿಸಿ ಇದ್ದರೆ, ಅತನು ಅಂಥಾ ಪೋಲಿಸ್ ವಿಚಾರಣೆಯ ಫಲವನ್ನು ಕುರಿತು ಸ್ಟೇಷನ್ ತಾಬೇದಾರಿಯಲ್ಲಿ ಇರುವ ಆಫಿಸರಿಗೆ ರಿಪೋರ್ಟನ್ನು ಕಳುಹಿಸತಕ್ಕದ್ದು.

ಸಬಾರ್ಡಿನೇಟು ಪೋಲೀಸ್ ಆಫೀಸರನುಮಾಡಿದ ಪೋಲೀಸ್ ವಿಚಾರಣೆಯ ರಿಪೋರ್ಟು

169. ಈ ಅಧ್ಯಾಯದಪ್ರಕಾರ ಮಾಡೋಣಾದ ಪೋಲಿಸು ವಿಚಾರಣೆಯಮೇಲೆ, ಆಪಾದನೆಪಟ್ಟ ಮನುಷ್ಯನನ್ನು ಮ್ಯಾಜಿಸ್ಟ್ರೇಟಿನಬಳಿಗೆ ಕಳುಹಿಸಿಕೊಡತಕ್ಕಬಗ್ಯೆ ಸಾಕಾದ ಸಾಕ್ಷ್ಯವೂ-ಯಾ-ಯುಕ್ತವಾದ ಗುಮಾನಿಯು, ಇಲ್ಲವೆಂತ ಪೋಲಿಸ್‌ಸ್ಟೇಷನ್ ಜಿಮ್ಮೆಯಲ್ಲಿ ಇರುವ ಆಫಿಸರಗೆ ತೋರಿದರೆ, ಸದರೀ ಆಫಿಸರನು, ಅಂಥಾ ಮನುಷ್ಯನು ಪಹರೆಯಲ್ಲಿ ಇರುವ ಪಕ್ಷಕ್ಕೆ, ಸದರೀ ಆಫಿಸರನು ಅಪ್ಪಣೆಕೊಡಬಹುದಾದ ಪ್ರಕಾರ ಅವನಿಂದ ಜಾಮೀನುದಾರರುಸಮೇತ-ಯಾ-ಜಾಮೀನು ಇಲ್ಲದೇನೇ, ಬಂದು ಪತ್ರವನ್ನ ಬರಕೊಟ್ಟಲ್ಲಿ, ಅವನನ್ನ ಬಿಟ್ಟು ಬಿಡಬಹುದು, ಆ ಪತ್ರದಲ್ಲಿ ಪೋಲಿಸ್ ರಿಪೋರ್ಟಮೇಲೆ ಆ ತಕ್ಸೀರನ್ನ ತನಖಿಮಾಡುವದಕ್ಕೆ ಮತ್ತು ಆಪಾದನೆ ಪಟ್ಟವನನ್ನ ದಯರ್ಾಪ್ತಿಮಾಡುವಬಗ್ಯಾಗಿ ಅಥವಾ ದಯರ್ಾಪ್ತಿಬಗ್ಯೆ ಕಮ್ಮಿಟು ಮಾಡುವಬಗ್ಯೆ ಆಗಲೀ ಅಧಿಕಾರ ಇರುವ ಮ್ಯಾಜಿಸ್ಟ್ರೇಟನಮುಂದೆ, ಹಾಜರಾಗುವಂತೆ ಹೇಳಿದಾಗ ಹಾಗೆ ಹಾಜರಾಗುವೆನೆಂಬದಾಗಿ ನಮೂದಿಸತಕ್ಕದ್ದು.

ಸಾಕ್ಷ್ಯವು ಸುಲಭ ಇರುವ ಸಂಗತಿಯಲ್ಲಿ ಆಪಾದನೆಪಟ್ಟವನನ್ನು ಬಿಡುಗಡೆ ಮಾಡೋಣ.

170. ಈ ಅಧ್ಯಾಯಪ್ರಕಾರ ಮಾಡೋಕಾದ ಪೋಲಿಸ್ ವಿಚಾರಣೆಯಲ್ಲಿ, ಸ್ಟೇಷ್ಷ ಜುಮ್ಮೆಯಲ್ಲಿ ಇರುವ ಅಫಿಸರಗೆ ಮೇಲೆ ಹೇಳಿದಪ್ರಕಾರ ಸಾಕಾವಷ್ಟು ಸಾಕ್ಷ್ಯವು ಅಥವಾ ಯುಕ್ತವಾದ ಸಬಬು ಉಂಟೆಂತ ಕಂಡುಬಂದರೆ, ಸದರೀ ಅಫಿಸರನು ಪೋಲಿಸ್ ರಿಪೋರ್ಟ್ಮೇಲೆ ಆ ತಕ್ಸೀರನ್ನು ತನಖಿಮಾಡುವದಕ್ಕೆ ಮತ್ತು ಆಪಾದನೆ ಪಟ್ಟವನನ್ನು ದಯರ್ಾಫ್ತಿ ಮಾಡುವಬಗ್ಯಾಗಲೀ—ಯಾ—ದರ್ಯಾಫ್ತಿ ಒಗ್ಯೆ ಕಮ್ಮಿಟ್ ಮಾಡುವಬಗ್ಯಾಗಲೀ ಅಧಿಕಾರ ಇರುವ ಮ್ಯಾಜಿಸ್ಟ್ರೇಟಿನಬಳಿಗೆ ಆಪಾದನೆ ಪಟ್ಟವನನ್ನು ಮೊಹಸಲೆ ಹಾಕಿ ಕಳುಹಿಸತಕ್ಕದ್ದು ; ಅಥವಾ ಸದರೀ ತಕ್ಸೀರು ಜಾಮೀನು ತಕ್ಕೊಳ್ಳಬಹುದಾದ್ದಾದರೆ ಮತ್ತು ಆಪಾದನೆ ಪಟ್ಟವನು ಜಾಮೀನು ಕೊಡಶಕ್ತನಾಗಿದ್ದರೆ, ಫಲಾನಾ ತಾರೀಕಂತ ನಿಶ್ಚಯಿಸಿ, ಆದಿನ ಮತ್ತು ಮ್ಯಾಜಿಸ್ಟ್ರೇಟನು ಅನ್ಯಥಾ ಅಪ್ಪಣೆ ಕೊಡುವವರಿಗೆ ಪ್ರತಿದಿನ ಅಂಥಾ ಮ್ಯಾಜಿಸ್ಟ್ರೇಟನಮುಂದೆ ಹಾಜರು ಇರುವ ಹಾಗೆ ಅವನಿಂದ ಬಂದು ಜಾಮೀನನ್ನು ತಕ್ಕೊಳ್ಳತಕ್ಕದ್ದು.

ಸಾಕ್ಷ್ಯವು ಸಾಕಾಗಿದ್ದರೆ ಮೊಕದ್ದಮೆಯನ್ನ ಮ್ಯಾಜಿಸ್ಟ್ರೇಟಗೆ ರವಾನಿಸತಕ್ಕದ್ದು.

ಸ್ಟೇಷ್ಷ ಜಿಮ್ಮೆಯಲ್ಲಿ ಇರುವ ಅಫಿಸರನು ಈ ಪ್ರಕರಣಪ್ರಕಾರ ಆಪಾದನೆ ಪಟ್ಟವನನ್ನು ಮ್ಯಾಜಿಸ್ಟ್ರೇಟನಬಳಿಗೆ ರವಾನಿಸುವಾಗ ಅಥವಾ ಅಂಥಾ ಮ್ಯಾಜಿಸ್ಟ್ರೇಟನಮುಂದೆ ಹಾಜರು ಆಗುವ ಹಾಗೆ ಈ ಪ್ರಕರಣಪ್ರಕಾರ ಜಾಮೀನು ತಕ್ಕೊಳ್ಳುವಾಗ, ಮ್ಯಾಜಿಸ್ಟ್ರೇಟನಮುಂದೆ ಅವಶ್ಯವಾಗಿ ಹಾಜರು ಪಡಿಸಬೇಕಾಗಬಹುದಾದ ಆಯುಧವನ್ನು—ಯಾ—ಇತರ ಪದಾರ್ಥವನ್ನು ಸಹಾ ಕಳುಹಿಸತಕ್ಕದ್ದು ; ಮತ್ತು ಫಿರ್ಯಾದುದಾರನು, ಯಾರಾದರೂ ಇದ್ದರೆ, ಅವನನ್ನೂ, ಮೊಕದ್ದಮೆಯ ಸಂಗತಿಗಳನ್ನು ತಿಳಿದವರಾಗಿ ಕಾಣಬರುವವರೊಳಗೆ ಅವಶ್ಯವಾದವರಿಂತ ಅಂಥಾ ಅಫಿಸರಗೆ ತೋರುವಷ್ಟುಮಂದಿಯೆನ್ನೂ ಮ್ಯಾಜಿಸ್ಟ್ರೇಟನಮುಂದೆ ಹಾಜರಾಗಿ, ಆಪಾದನೆ ಪಟ್ಟವನಮೇಲೆ ಏರ್ಪಡಿಸೋಕಾದ ಆಪಾದನೆ ಬಾಬಿನಲ್ಲಿ ಫಿರ್ಯಾದ್ ನಡಿಸುವದಾಗಿ ಅಥವಾ (ಸಂಗತ್ಯಾನುಸಾರ) ಸಾಕ್ಷ್ಯಕೊಡುವದಾಗಿ ಬಂದುಪತ್ರ ಒರಕೊಡಬೇಳಿ ಅಪೇಕ್ಷಿಸತಕ್ಕದ್ದು.

ಅಂಥಾ ಪತ್ರದಲ್ಲಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟು—ಯಾ—ಸಬ್ಡಿವಿಜನಲ್ ಮ್ಯಾಜಿಸ್ಟ್ರೇಟು ಕೋರ್ಟೆಂತ ನಮೂದಾಗಿದ್ದರೆ, ವಿಚಾರಣೆಗಾಗಿ—ಯಾ—ದರ್ಯಾಫ್ತಿಗಾಗಿ ಅಂಥಾ ಮ್ಯಾಜಿಸ್ಟ್ರೇಟು ರಿಫರ್ ಮಾಡುವ ಯಾವ ಕೋರ್ಟನ್ನಾದರೂ ಅದು ಅಡಗಿಸಿಕೊಂಡಿದ್ದೆ ಎಂದು ಗ್ರಹಿಸಲ್ಪಡತಕ್ಕದ್ದು, ಪರಂತು ಹಾಗೆ ರಿಫರ್ಮಾಡಿದ ಸಂಗತಿಕುರಿತು ಅಂಥಾ ಫಿರ್ಯಾದುದಾರಗೆ—ಯಾ—ಜನರಿಗೆ ತಕ್ಕ ನೋಟೀಸು ಕೊಟ್ಟಲ್ಪಡಬೇಕು.

ಈ ಪ್ರಕರಣಪ್ರಕಾರ ನಿಶ್ಚಯಿಸಬೇಕಾದ ತಾರೀಖು ಆಪಾದನೆಪಟ್ಟ ಮನುಷ್ಯನನ್ನು ಜಾಮೀನುಮೇಲೆ ಬಿಡೋಕಾಗಿದ್ದರೆ ಅತನು ಮ್ಯಾಜಿಸ್ಟ್ರೇಟನಮುಂದೆ ಯಾವ ತಾರೀಖಿಗೆ ಹಾಜರಾಗಬೇಕೋ ಆ ತಾರೀಖಾಗಿಯೂ, ಮೊಹಸಲೆಮೇಲೆ ಆಪಾದನೆ ಪಟ್ಟವನನ್ನು ಕಳುಹಿಸಿದ ಸಂಗತಿಯಲ್ಲಿ ಅಂಥಾ ಮ್ಯಾಜಿಸ್ಟ್ರೇಟು ಕೋರ್ಟನಲ್ಲಿ ತಲ್ಪುವದಾಗಿ ನಿರೀಕ್ಷಿಸೋಕಾದ ತಾರೀಖಾಗಿಯೂ, ಇರತಕ್ಕದ್ದು.

ಪತ್ರವು ಯಾವ ಅಫಿಸರನ ಸಮಕ್ಷಮದಲ್ಲಿ ಬರದುಕೊಡಲ್ಪಟ್ಟಿತೋ ಆ ಅಫಿಸರನು ಅದರ ಒಂದು ಪ್ರತಿಯನ್ನ ಆ ಪತ್ರ ಬರಕೊಟ್ಟ ಒಬ್ಬನಿಗೆ ಕೊಟ್ಟು, ಮೂಲಪ್ರತಿಗಳನ್ನ ತನ್ನ ರಿಪೋರ್ಟಿನೊಂದಿಗೆ ಮ್ಯಾಜಿಸ್ಟ್ರೇಟ ನಬಳಿಗೆ ರವಾನಿಸತಕ್ಕದ್ದು.

ಫಿರ್ಯಾದಿದಾರಾಗಲೀ ಸಾಕ್ಷಿಗಳಾಗಲೀ ಪೊಲೀಸ್ ಅಫೀಸರರ ಸಂಗಡಲೇ ಹೋಗ ಹೇಳತಕ್ಕದ್ದಿಲ್ಲ.

171. ಯಾವನೊಬ್ಬ ಫಿರ್ಯಾದಿದಾರನಾಗಲೀ ಸಾಕ್ಷಿಗಾರನಾಗಲೀ, ಮ್ಯಾಜಿಸ್ಟ್ರೇಟು ಕೋರ್ಟಿಗೆ ಹೋಗುವಾಗ ಪೋಲಿಸ್ ಅಫೀಸರ ಸಂಗಡಲೇ ಹೋಗಬೇಕೆಂತ ಹೇಳತಕ್ಕದ್ದಿಲ್ಲ,

ಫಿರ್ಯಾದಿದಾರರನ್ನು ಸಾಕ್ಷಿಗಳನ್ನು ಆಟಂಕಕ್ಕೆ ಒಳಪಡಿಸಕೂಡದು.

ಅಥವಾ, ಅವನನ್ನು ಅನಾವಶ್ಯಕವಾಗಿ ನಿರ್ಬಂಧಪಡಿಸಲೂ, ಇಕ್ಕಟ್ಟು ಪಡಿಸಲೂ, ಕೂಡದು, ಅಥವಾ ಅವನ ಹಾಜರಾತಿ ಒಗ್ಯೆ ಅವನ ಸ್ವಂತ ಪತ್ರವಿನಹಾ ಜಾಮೀನು ಕೊಡಬೇಳಿ ಅಪೇಕ್ಷಿಸಲೂ ಕೂಡದು.

1106

ತಿರಸ್ಕರಿಸುವ ಫಿರ್ಯಾದುದಾರರನ್ನು ಯಾ ಸಾಕ್ಷಿಯನ್ನು ಪಹರೆಹಾಕಿ ಕಳುಹಿಸಬಹುದು.

ಪರಂತು, ಯಾವ ಫಿರ್ಯಾದುದಾರನಾಗಲೀ—ಯಾ—ಸಾಕ್ಷಿಗಾರನಾಗಲೀ ಹಾಜರಾಗದೆ ನಿರಾಕರಿಸಿದರೂ, ಅಥವಾ 170ನೇ ಪ್ರಕರಣದಲ್ಲಿ ನಿರ್ದಿಷ್ಟವಾದ ಮುಚ್ಚಲಿಕೆಯನ್ನು ಬರಕೊಡಲಿಕ್ಕೆ ನಿರಾಕರಿಸಿದರೂ, ಅಂಥಾ ಸಂಗತಿಯಲ್ಲಿ, ಪೋಲೀಸ್ ಸ್ಟೇಷ್ಟ ಜಿಮ್ಮೇದಾರನಾದ ಆಫೀಸರನು ಅಂಥವನನ್ನು, ಮೊಹಲೆನಿಶಿ ನ್ಯಾಯಸ್ಟ್ರೇಟಿನ ಬಳಿಗೆ ಕಳುಹಿಸಬಹುದು. ಸದರೀ ಮ್ಯಾಜಿಸ್ಟ್ರೇಟು ಅವನು ಅಂಥಾ ಪತ್ರವನ್ನು ಬರಕೊಡುವವ್ಯಂತವಾಗಲೀ—ಯಾ—ಮೊಕದ್ದಮೆಯ ವಿಚಾರಣೆ ಪೂರ್ತಿಯಾಗುವ ಪರ್ಯಂತವಾಗಲೀ, ಅವನನ್ನು ಪಹರೆಯಲ್ಲಿ ತಡಿದಿಡಬಹುದು.

ಪೋಲೀಸ್‌ವಿಚಾರಣೆ ಪ್ರೊಸೀಡಿಂಗ್ಸುಗಳ ಡೈರಿ.

172. ಈ ಅಧ್ಯಾಯದ ಪ್ರಕಾರ ಪೋಲೀಸ್ ವಿಚಾರಣೆಮಾಡುವ ಪ್ರತಿ ಪೋಲೀಸ್ ಆಫೀಸರನು ತನ್ನ ಪ್ರೊಸೀಡಿಂಗ್ಸುಗಳನ್ನು ತನ್ನ ಡೈರಿಯಲ್ಲಿ ದಿನೇ ದಿನೇ ದಾಖಲು ಮಾಡತಕ್ಕದ್ದು, ಅದರಲ್ಲಿ ವರ್ತಮಾನವು ಎಷ್ಟುಪೊತ್ತಿಗೆ ತನಗೆ ತಲಪಿತೆಂಬುದು, ತಾನು ಪೋಲೀಸ್ ವಿಚಾರಣೆ ಆರಂಭಿಸಿದ ಮತ್ತು ವಿಚಾರಣೆ ಪೂರ್ತಿ ಮಾಡಿದ ಕಾಲ, ತಾನು ನೋಡಿದಂಥಾ ಸ್ಥಳ—ಯಾ—ಸ್ಥಳಗಳು ಇತ್ಯಾದಿಂಥಾದ್ದೆಂತಲೂ, ಬರೆಯುವದು ಶಿವಾಯಿ ಅವನ ವಿಚಾರಣೆಯಲ್ಲಿ ತಿಳಿದುಬಂದ ಸಂಗತಿಗಳು ಕೂಡಾ ಬರೆಯಬೇಕು.

ಯಾವ ಕ್ರಿಮಿನಲ್ ಕೋರ್ಟಿನವರಾದರೂ ಸರಿಯೇ, ಸದರೀ ಕೋರ್ಟಿನಲ್ಲಿ ವಿಚಾರಣೆ—ಯಾ—ದಯರ್ಾಫ್ತಿಯಲ್ಲಿರುವ ಮೊಕದ್ದಮೆಯ ಬಾಬತು ಪೋಲೀಸ್ ಡೈರಿಗಳನ್ನು ತರಿಸಿಕೊಳ್ಳಬಹುದು. ಮತ್ತು ಅಂಥಾ ಡೈರಿಗಳನ್ನು ಸದರೀ ಮೊಕದ್ದಮೆಯಲ್ಲಿ ರುಜುವಾತಾಗಿ ಅಲ್ಲದಿದ್ದಾಗ್ಯೂ, ಅಂಥಾ ವಿಚಾರಣೆ—ಯಾ—ದಯರ್ಾಫ್ತಿ ಕಾಲದಲ್ಲಿ ತಮಗೆ ಸಹಾಯಾರ್ಥವಾಗಿ ಉಪಯೋಗಿಸಬಹುದು. ಕೈದೀಗೆಯಾಗಲೀ ಅವನ ಮುಖ್ತಾರ್‌ಕರಿಗಾಗಲೀ ಅಂಥಾ ಡೈರಿ ಕೊಡಕೆಳಲಿಕ್ಕೆ ಅರ್ಹತೆ ಇಲ್ಲ, ಅಥವಾ ಅವುಗಳನ್ನು ಕೋರ್ಟಿನವರು ರಿಫರು ಮಾಡುತ್ತಾರೆಂಬ ಸಬಬಿನಮೇಲೆಯೇ ಮಾತ್ರ ಅವುಗಳನ್ನು ನೋಡಲಿಕ್ಕೆ ಅವನಾಗಲೀ ಅವರಾಗಲೀ ಅರ್ಹತೆ ಉಳ್ಳವರಾಗಿ, ಇರುವದಿಲ್ಲ ; ಆದರೆ ಅವುಗಳನ್ನು ತಯ್ಯಾರುಮಾಡಿದ ಪೋಲೀಸ್ ಆಫೀಸರನಿಂದ, ಜ್ಞಾಪಕ ಪಡಿಸಿಕೊಳ್ಳುವದಕ್ಕಾಗಿ ಅವುಗಳು ಉಪಯೋಗಿಸಲ್ಪಟ್ಟಾಗ, ಅಥವಾ ಅಂಥಾ ಪೋಲೀಸ್ ಆಫೀಸರು ಹೇಳುವದನ್ನು ವಿರುದ್ಧಿಸಲಿಕ್ಕೆ ಅವುಗಳನ್ನು ಕೋರ್ಟಿನವರು ಉಪಯೋಗಿಸಿಕೊಂಡರೆ, 1872ನೇ ಇಸವಿ ಇಂಡಿಯನ್ ಎವಿಡೆನ್ಸ್ ಆಕ್ಟಿನ 161 ಅಥವಾ 145ನೇ ಪ್ರಕರಣದ ನಿಬಂಧನೆಗಳು ಸಂಗತ್ಯಾನುಸಾರವಾಗಿ ಅವುಗಳಿಗೆ ಲಗಾವಾಗತಕ್ಕದ್ದು.

ಪೋಲೀಸ್ ಆಫೀಸರನ ರಿಪೋರ್ಟು.

173. ಈ ಅಧ್ಯಾಯಕ್ಕನುಗುಣವಾಗಿ ಮಾಡುವ ಪ್ರತಿ ಪೋಲೀಸ್ ವಿಚಾರಣೆಯು ಅನಾವಶ್ಯಕವಾದ ಕಾಲವಿಳಂಬವಿಲ್ಲದೆ ಪೂರ್ತಿ ಮಾಡತಕ್ಕದ್ದು, ಮತ್ತು, ಪೂರ್ತಿಯಾದಕೂಡಲೇ, ಪೋಲೀಸ್ ಸ್ಟೇಷ್ಟ ಜಿಮ್ಮೇದಾರಿಯಲ್ಲಿ ಇರುವ ಪೋಲೀಸು ಆಫೀಸರನು ಮೈಸೂರು ಗವರ್ನಮೆಂಟಿನವರಿಂದ ನಿರ್ದೇಶಿಸಲ್ಪಟ್ಟ, ನಮೂನೆಯಲ್ಲಿ ಬಂದು ರಿಪೋರ್ಟನ್ನು, ಪೋಲೀಸ್ ರಿಪೋರ್ಟು ಮೇಲೆ, ಆ ತಕ್ಕೀರಿನ ಬಾಬಿನಲ್ಲಿ ತನಖಿಮಾಡುವದಕ್ಕೆ ಅಧಿಕಾರವಿರುವ ಮ್ಯಾಜಿಸ್ಟ್ರೇಟಿಗೆ ಕಳುಹಿಸತಕ್ಕದ್ದು, ಆ ರಿಪೋರ್ಟಿನಲ್ಲಿ ಆಪ್ತಿಗಾರರ ಹೆಸರುಗಳನ್ನೂ, ವರ್ತಮಾನದಸ್ವಭಾವವನ್ನು ಸದರೀ ಮೊಕದ್ದಮೆಯ ಸಂಗತಿಗಳನ್ನು ಬಲ್ಲವರಾಗಿ ತೋರುವ ಜನರ ಹೆಸರುಗಳನ್ನು, ಆಪಾದನೇಪಟ್ಟ ಮನುಷ್ಯನು ಪಹರೆನಿಶಿ ಕಳುಹಿಸಲ್ಪಟ್ಟಿದ್ದಾನೋ ಅಥವಾ ಜಾಮೀನುಸಮೇತ—ಯಾ—ಜಾಮೀನು ಇಲ್ಲದೆ ಅತನ ಪತ್ರದಮೇಲೆಯೇ ಬಿಡಲ್ಪಟ್ಟಿದ್ದಾನೋ ಎಂಬ ಸಂಗತಿಗಳು ಕೂಡ ನಮೂದುಮಾಡತಕ್ಕದ್ದು.

ಮೇಲ್ ಉದ್ಯೋಗಸ್ಥನು ಮೊಕರರ್‌ಪಟ್ಟು ಇರುವ ಸಂಗತಿಯಲ್ಲಿ, ಅಂಥಾ ರಿಪೋರ್ಟು ಅವನ ಮುಖಾಂತರ ಕಳುಹಿಸಲ್ಪಡತಕ್ಕದ್ದು, ಮತ್ತು ಮ್ಯಾಜಿಸ್ಟ್ರೇಟರ ಹುಕುಂ ಬರುವ ತನಕ, ಇನ್ನು ಹೆಚ್ಚಿನ ಪೋಲೀಸ್ ವಿಚಾರಣೆ ಮಾಡಬೇಕೆಂತ, ಪೋಲೀಸ್ ಸ್ಟೇಷ್ಟ ಜಿಮ್ಮೇದಾರಿಯಲ್ಲಿ ಇರುವ ಆಫೀಸರಿಗೆ ಆತನು ಅಪ್ಪಣೆಮಾಡಬಹುದು.

ಈ ಪ್ರಕರಣದಪ್ರಕಾರ ಕಳುಹಿಸೋಣಾದ ರಿಪೋರ್ಟಿನಿಂದ ಅಪಾದನೆಪಟ್ಟವನು ಅತನ ಪತ್ರವಮೇಲೆ ಬಿಡುಗಡೆ ಮಾಡಲ್ಪಟ್ಟಿದ್ದಾನೆಂತ ತೋರಿದಾಗ, ಅಂಥಾ ಪತ್ರವಿಮೋಚನೆ ಪಡಿಶಿಯಾಗಲೀ, ಅನ್ಯಥಾ ಆಗಲೀ ಮ್ಯಾಜಿ. ಸ್ಟ್ರೇಟನು ತನಗೆ ಯುಕ್ತತೋರುವಪ್ರಕಾರ ಹುಕುಮನ್ನು ಮಾಡತಕ್ಕದ್ದು.

ಆತ್ಮಹತ್ಯೆ ಮುಂತಾವ ಬಾಬುಗಳಲ್ಲಿ ಪೋಲೀಸಿನವರು ವಿಚಾರಣೆಮಾಡಿ ರಿಪೋರ್ಟುಮಾಡತಕ್ಕದ್ದು.

174. ಪ್ರೋಲಿಸ್ ಸ್ಟೇಷ್ಷ ಜೆಮ್ಮೆಯಲ್ಲಿ ಇರುವ ಪ್ರತಿ ಒಬ್ಬ ಆಫಿಸರನಿಗೆ, ಯಾವನೊಬ್ಬ ಮನುಷ್ಯನಾಗಲಿ—

(a) ಆತ್ಮಹತ್ಯೆ ಮಾಡಿಕೊಂಡಿದ್ದಾನೆಂತಾಗಲೀ, ಅಥವಾ,

(b) ಬೇರೆಯವನಿಂದ ಅಥವಾ ಒಂದು ಜಂತುವಿನಿಂದ-ಯಾ-ಎಂತ್ರದಿಂದ ಅಥವಾ ಅಕಸ್ಮಾತ್ತಾದ ಅಪಾಯದಿಂದ, ಕೊಲ್ಲಲ್ಪಟ್ಟಿದ್ದಾನೆಂತ, ಅಥವಾ

(c) ಬೇರೆ ಒಬ್ಬನು ಒಂದು ತಕ್ಸೀರು ಮಾಡಿದ್ದಾನೆಂತ ನ್ಯಾಯವಾಗಿ ಗುಮಾನು ಹುಟ್ಟುವ ತರದ ಸಂಗತಿಗಳಲ್ಲಿ ಸ್ರೊಬ್ಬನು ಮರಣಪಟ್ಟಿದ್ದಾನೆಂತ.

ವರ್ತಮಾನ ಬಂದಲ್ಲಿ, ಆತನು ಅವಿಧಿವುಗಣದ ವಿಚಾರಣೆಯನ್ನು ಮಾಡುವದಕ್ಕೆ ಅಧಿಕಾರಪಟ್ಟು ಇರುವ ಅತ್ಯಂತ ಸವಿಾಪದಲ್ಲಿ ಇರುವ ಮ್ಯಾಜಿಸ್ಟ್ರೇಟಿಗೆ ತಕ್ಷಣದಲ್ಲಿ ಆ ಬಾಬಿನ ವರ್ತಮಾನ ಕೊಡತಕ್ಕದ್ದು, ಮತ್ತು, ಮೈಸೂರು ಗವರ್ಮೆಂಟಿನವರಿಂದ ಏರ್ಪಡಿಸೋಣಾದ ಯಾವದೊಂದು ಕಾಯಿದೆಯಿಂದ ಅಥವಾ ಡಿಸ್ಟ್ರಿಕ್ಟು-ಯಾ-ಸಬ ಡಿವಿಜನಲ್ ಮ್ಯಾಜಿಸ್ಟ್ರೇಟಿನಿಂದ ಕೊಡೋಣಾದ ಸಾಧಾರಣ-ಯಾ-ವಿಶೇಷ ಹುಕುಮಿನಿಂದ ಅನ್ಯಥಾ ಅನುಜ್ಞಾ ಸೋಣಾಗದೆ ಇರುವ ಪಕ್ಷಕ್ಕೆ, ಆ ಮೇರಿಗೆ ಮೃತಪಟ್ಟ ಮನುಷ್ಯನ ಕರೀರ ಇರುವಂಥಾ ಸ್ಥಳಕ್ಕೆ ಕೂಡಲೇ ಹೋಗಿ, ಮತ್ತು ಅಲ್ಲಿ, ನೆರೆಹೊರೇ ವಾಸಸ್ಥರಾದ ಎರಡು-ಯಾ-ಹೆಚುಮಂದಿ ಮರ್ಯಾದೆವಂತರಾದ ಗೃಹಸ್ಥರ ಸಮಕ್ಷಮದಲ್ಲಿ, ಪೋಲಿಸ್ ವಿಚಾರಣೆಮಾಡುವದಲ್ಲದೆ ಮರಣಕ್ಕೆ ದ್ಯೋತಕವಾಗಿ ಇರುವ ಕಾರಣ ಫಲಾನಾದೆಂತಲೂ, ಶರೀರದಮೇಲೆ ಕಾಣಬರುವ ಘಾಯಗಳೂಬಡೆದ-ಯಾ-ಗೀರಿನ ಜಖಿಮಿನ ಗುರ್ತುಗಳು-ವ-ಬೇರೆ ಜಖಮಿನ ಕಲೆಗಳು ಫಲಾನಾದೆಂತಲೂ ಫಲಾನಾರೀತೀಲಿ ಫಲಾನಾ ಆಯುಧದಿಂದ-ಯಾ-ಸಾಧಕದಿಂದ (ಯೇನಾದರೂ ಇದ್ದರೆ) ಆ ಗುರ್ತುಗಳು ಉದ್ದಾಗಿಕಾಣಬರುತ್ತದೆಂತಲೂ ಸಹ ವಿವರವಾಗಿ ರಿಪೋರ್ಟ್ ಮಾಡತಕ್ಕದ್ದು,

ಸದರೀ ರಿಪೋರ್ಟಿಗೆ ಆ ಪೋಲಿಸ್ ಆಫಿಸರೂ ಮತ್ತು ಇತರ ಮನುಷ್ಯರೂ, ಅಥವಾ ಅವರಪೈಕಿ ಅದರಲ್ಲಿ ವಿಕೀಭವಿಸುವಂಥಾ ಮನುಷ್ಯರೂ ದಸ್ಕತುಮಾಡಿ, ಕೂಡಲೇ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟಿನ-ಯಾ-ಸಬ ಡಿವಿಜನಲ್ ಮ್ಯಾಜಿಸ್ಟ್ರೇಟಿನ ಬಳಿಗೆ ಕಳುಹಿಸತಕ್ಕದ್ದು.

ಮರಣಕ್ಕೆ ಕಾರಣ ಫಲಾನದೆಂಬ ವಿಷಯದಲ್ಲಿ ಸಂಶಯವಿದ್ದರೆ, ಅಥವಾ ಬೇರೆ ಯಾವ ಕಾರಣದಿಂದಾದರೂ ಶವವನ್ನು ಪರಿಕ್ಷಿಸುವಬಗ್ಗೆ ಕಳುಹಿಸುವದು ಯುಕ್ತವಾಗಿ ಪೋಲಿಸ್ ಆಫಿಸರನಿಗೆ ಕಂಡ ಸಂಗತಿಯಲ್ಲಿ, ಈ ಬಗ್ಗಾಗಿ ಮೈಸೂರು ಗವರ್ಮೆಂಟಿನವರು ಏರ್ಪಡಿಸುವ ಕ್ರಮಗಳಿಗೆ ಬಳಪಟ್ಟು, ಶವವನ್ನು ಪರಿಶೋಧಿಸುವ ನಿಮಿತ್ಯವಾಗಿ, ಕಾಲಸ್ಥಿತಿಯನ್ನು ದೂರವನ್ನು ನೋಡಲಾಗಿ ಹಾದೀಲಿ ಹೆಣಕೊಳತು ಅಂಥಾ ಪರಿಶೋಧನೆ ಅಪ್ರಯೋಜಕವಾಗಿರುವದೆಂತ ತೋರುವ ಸಂಭವ ಇಲ್ಲದೇನೇ ಇರುವ ಸಂಗತಿಯಲ್ಲಿ, ಅದನ್ನು ಅತಿ ಸವಿಾಪದಲ್ಲಿ ಇರುವ ಶಿವಿಲ್ ಸರ್ಜನಿನ ಅಥವಾ ಇದಕ್ಕಾಗಿಯೇ ಮೈಸೂರು ಗವರ್ಮೆಂಟಿನವರಿಂದ ನೊಕರರಪಟ್ಟ ಇತರ ಮೆಡಿಕಲ್ ಆಫಿಸರನ ಬಳಿಗೆ ರವಾನಿಸತಕ್ಕದ್ದು.

ಈ ಪ್ರಕರಣವನ್ನನುಸರಿಸಿ ಮಾಡುವ ವಿಚಾರಣೆಗಳು ಗ್ರಾಮಪಟೇಲನಿಂದ ನಡಿಸಲ್ಪಡಬಹುದು. ಆನಂತರ ಅತನು ಅವುಗಳ ಫಲಿತಾಂಶವನ್ನು ದರ್ಯಾಫ್ತಿ ಮಾಡುವದಕ್ಕೆ ಅಧಿಕಾರವುಳ್ಳ ಅತ್ಯಂತ ಸವಿಾಪವಾಗಿರುವ ಮ್ಯಾಜಿಸ್ಟ್ರೇಟರಿಗೆ ತಿಳಿಸಬೇಕು.

1108

ಅವಿಧಿಯು ಮರಣಗಳನ್ನು ಕುರಿತು ವಿಚಾರಣೆ ಮಾಡುವದಕ್ಕೆ ಈ ಕೆಳಗೆ ಕಾಣಿಸಿದ ಮ್ಯಾಜಿಸ್ಟ್ರೇಟರ ಅಧಿಕಾರಪಟ್ಟಿರುತ್ತಾರೆ; ಯಾರಂದರೆ, ಯಾವನೊಬ್ಬ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟು—ಯಾ—ಸಬ್ ಡಿವಿಜನ್ ಮ್ಯಾಜಿಸ್ಟ್ರೇಟು ಮತ್ತು ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರಿಂದಾಗಲೀ—ಯಾ—ಮೈಸೂರು ಗವನರ್ಮೆಂಟಿನವರಿಂದಾಗಲೀ, ಈ ಬಗ್ಗಾಗಿ ವಿಶೇಷವಾಗಿ ಅಧಿಕಾರಪಟ್ಟ ಯಾವನೊಬ್ಬ ಮ್ಯಾಜಿಸ್ಟ್ರೇಟು.

ಮನುಷ್ಯರನ್ನು ಸಮ್ಮರ್ಕ ಮಾಡುವದಕ್ಕೆ ಅಧಿಕಾರ.

175. ಒಂದು ಪೋಲಿಸ್ ಸ್ಟೇಷನಿನ ಜವಾಬ್ದಾರನಾದ ಆಫೀಸರನು, ಒರಜ ಮೂಲಕವಾದ ಒಂದು ಹುಕುಮಿನ ಮೂಲವಾಗಿ, ಸದರೀ ಪೋಲಿಸ್ ವಿಚಾರಣೆ ಉದ್ದಿಶ್ಯ, ಮೇಲೆ ನ ಮೂದಿಸೋಣಾದ ಮೇರೆಗೆ ಇಬ್ಬರನ್ನು—ಯಾ—ಹೆಚ್ಚು ಮಂದಿಯನ್ನು, ಮತ್ತು ಸದರೀ ಮೊಕದ್ದಮೆಯ ವಿದ್ಯಮಾನಗಳನ್ನು ಬಲ್ಲವನಾಗಿ ತೋರುವ ಇತರ ಮನುಷ್ಯನನ್ನು ಸಮ್ಮರ್ಕ ಮಾಡಬಹುದು. ಹಾಗೆ ಸಮ್ಮರ್ಕ ಮಾಡಲ್ಪಟ್ಟ ಪ್ರತಿ ಒಬ್ಬ ಮನುಷ್ಯನು ಹಾಜರಾಗಿ ತನ್ನ ಮೇಲೆ ಉಪಾದನೆ ಹೊರಿಸುವ—ಯಾ—ದಂಡಕ್ಕೆ—ಯಾ—ಶೀಕ್ಷೆಗೆ ಗುರಿಪಡಿಸಬಹುದಾಗಿ ಭಾವ ತೋರುವ ಪ್ರಶ್ನೆಗಳು ಹಾಗು ಮಿ. ಅಂಥಾ ಆಫೀಸರು ಹಾಕುವ ಇತರ ಎಲ್ಲ ಪ್ರಶ್ನೆಗಳಿಗೆ ನಿಜವಾಗಿ ಜವಾಬುಗಳನ್ನು ಕೊಡಲಿಕ್ಕೆ ಅಂಥಾ ಮನುಷ್ಯನು ಬದ್ಧನಾಗಿರತಕ್ಕದ್ದು.

ಸದರೀ ವಿದ್ಯಮಾನಗಳು, 170ನೇ ಪ್ರಕರಣಕ್ಕೆ ಲಗಾವಾಗಿ ಅಂಥಾ ವಾರಂಟಿಲ್ಲದೆ ಹಿಡಿಯಬಹುದಾದ ಒಂದು ತಕ್ಸೀರು ಹೊರಪಡಿಸದಿದ್ದರೆ, ಅಂಥವರು ಒಬ್ಬ ಮೇಜಿಸ್ಟ್ರೇಟಿನ ಕೋರ್ಟಿಗೆ ಹಾಜರಾಗತಕ್ಕದ್ದೆಂದು ಪೋಲಿಸು ಆಫೀಸರರಿಂದ ಅಪೇಕ್ಷಿಸಲ್ಪಡಕೂಡದು.

ಮರಣದ ಕಾರಣವನ್ನು ಕುರಿತು ಮೇಜಿಸ್ಟ್ರೇಟಿನಿಂದ ವಿಚಾರಣೆ

176. ಪೋಲಿಸ್‌ನವರ ಮೊಹಸಲೆಯಲ್ಲಿ ಇರುವಾಗ ಯಾವನೊಬ್ಬನಾಗಲೀ ಮರಣಪಟ್ಟರೆ, ಅವಿಧಿ ಮರಣಗಳ ಬಾಬಿನಲ್ಲಿ ವಿಚಾರಣೆ ಮಾಡುವಬಗ್ಗೆ ಅಧಿಕಾರ ಇರುವ ಅತ್ಯಂತ ಸಮೀಪದಲ್ಲಿರುವ ಮೇಜಿಸ್ಟ್ರೇಟನು, ಮತ್ತು 174ನೇ ಪ್ರಕರಣದ (a), (b), ಮತ್ತು (c) ಕ್ಲಾಸುಗಳಲ್ಲಿ ನಮೂದಿಸೋಣಾದ ಇತರ ಯಾವದಾದರೂ ಸಂಗತಿಗಳಲ್ಲಿ, ಹಾಗೆ ಪ್ರವರ್ತಿಸುವದಕ್ಕೆ ಅಧಿಕಾರಪಟ್ಟು ಇರುವ ಯಾವನೊಬ್ಬ ಮೇಜಿಸ್ಟ್ರೇಟನಾಗಲೀ ಮರಣದ ಕಾರಣಕುರಿತು ಪೋಲಿಸ್ ಆಫೀಸರಿಂದ ನಡೆದ ಪೋಲಿಸು ವಿಚಾರಣೆಗೆ ಬದಲಾಗಿಯಾಗಲೀ, ಅಥವಾ ಸದರೀ ವಿಚಾರಣೆಗೆ ಕೂಡಿಸಿಯಾಗಲೀ, ಪೋಲಿಸು ವಿಚಾರಣೇ ಮಾಡಬಹುದು; ಮತ್ತು ಅತನು ಹಾಗೆ ಮಾಡಿದರೆ, ಅದನ್ನು ನಡಿಸುವದರಲ್ಲಿ ಒಂದು ತಕ್ಸೀರನ್ನು ವಿಚಾರಣೆ ಮಾಡುವಲ್ಲಿ ತನಗೆ ಇರಬಹುದಾದ ಅಧಿಕಾರಗಳನ್ನೆಲ್ಲ ಅತಗೆ ಇರತಕ್ಕದ್ದು. ಅಂಥಾ ವಿಚಾರಣೆಯನ್ನು ಮಾಡುವಲ್ಲಿ ಮೇಜಿಸ್ಟ್ರೇಟ್ ಸದರೀ ಮೊಕದ್ದಮೆಗಳಿಗೆ ಸಂದರ್ಭಾನುಸಾರವಾಗಿ ಇನ್ನು ಕೆಳಗೆ ನಿರ್ದೇಶಿಸುವ ರೀತಿಗಳೊಳಗೆ ಯಾವದಾದರೊಂದರ ಪ್ರಕಾರ ತಾನು ತಕ್ಕೊಂಡ ಬಾಬತು ಅದಕ್ಕೆ ಸಂಬಂಧವಾದ ಸಾಕ್ಷ್ಯವನ್ನು ರಿಕಾರ್ಡು ಮಾಡತಕ್ಕದ್ದು.

ಹೂಣಿಟ್ಟ ಶವವನ್ನು ತೆಗಿಸುವ ಅಧಿಕಾರ.

ಯಾವನೊಬ್ಬನ ಶವವು ಮೊದಲೇ ಹೂಣಲ್ಪಟ್ಟು ಇದ್ದು, ಅತನ ಮರಣದ ಕಾರಣವನ್ನು ಕಂಡು ಹಿಡಿಯುವ ನಿಮಿತ್ಯ, ಶವವನ್ನು ಪರಿಶೋಧಿಸುವದು ಯುಕ್ತವಾದ್ದೆಂತ ಅಂಥಾ ಮೇಜಿಸ್ಟ್ರೇಟಿಗೆ ತೋರಿಬಂದರೆ, ಅಂಥಾ ಶವವನ್ನು ಹೂಣಿಟ್ಟಲ್ಲಿಂದ ಮೇಲಕ್ಕೆ ತೆಗಿಸಿ ಪರಿಶೋಧಿಸಬಹುದು.